**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**O.S. No. 333/2025**

**ಸಾಕ್ಷಿಯನ್ನು ದಿನಾಂಕಃ 30.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ಹೆಚ್.ಕೆ. / ಶ್ರೀ. ಎಸ್.ಕೆ.ಜಿ. ವಕೀಲರಿಂದಃ**

ಈ ದಾವೆಯಲ್ಲಿ ನಾನು **2 ನೇ ವಾದಿಯಾಗಿರುತ್ತೇನೆ**. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ದಾವೆಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಪ್ರತಿವಾದಿ ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಎಂದು, ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಮಾಹಿತಿ ಹಕ್ಕಿನ ಕಾಯಿದೆ ಅಡಿಯಲ್ಲಿ ನೀಡಿದ ಅರ್ಜಿಗೆ ಅವರು ನೀಡಿದ ಮಾಹಿತಿಯ ವಿವರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-2** ಎಂದು, ನನ್ನ ತಂದೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್, ನಾಗನಹಳ್ಳಿ, ಹೆಚ್.ಡಿ. ಕೋಟೆಯಲ್ಲಿ ಹೊಂದಿಗೆ ಪಾಸ್ ಪುಸ್ತಕ / ಕಿಸಾನ್ ಸಹಕಾರ ಕ್ರೆಡಿಟ್ ಕಾರ್ಡ್ ಅನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-3** ಎಂದು, ನನ್ನ ತಂದೆಯ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-4** ಎಂದು, 01 ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-5** ಎಂದು, ಮುಟೇಷನ್ ರಿಜಿಸ್ಟರ್ ನ ಆನ್ ಲೈನ್ / ಡಿಜಿಟಲ್ ಪ್ರತಿಯನ್ನು **ನಿ.ಪಿ.-6** ಎಂದು, ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-7** ಎಂದು ಮತ್ತು ನನ್ನ ತಂದೆಯು ಕಾಣೆಯಾದ ಬಗ್ಗೆ ದೂರನ್ನು ನೀಡಿದ ಸಂಬಂಧ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ದಾಖಲಿಸಿದ ಪ್ರಥಮ ವರ್ತಮಾನ ವರದಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-8** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿಗಳ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**